ಪ್ರತಿಯೊಂದು ಹಳ್ಳಿಯಲ್ಲಿ ಮುಂಚಿನ ಹಾಗೆ ನಾಟಿ ಪಶುವೈದ್ಯರು ಸೃಷ್ಟಿಯಾದರೆ ದೇಶದ ಸಂಪತ್ತು ಉಳಿಯುವುದಲ್ಲದೆ ಪಶುಗಳ ಮತ್ತು ಜನರ ಆರೋಗ್ಯ ಸುಧಾರಣೆಯಾಗುತ್ತದೆ. ಒಂದು ವೇಳೆ ನಿಮ್ಮ ಬಳಿ ಹಸು ಇಲ್ಲದಿದ್ದರೂ ಪರವಾಗಿಲ್ಲ, ಕಲಿಯಲು ಆಸಕ್ತಿ ಇದ್ದರೂ ಸಾಕು ಗೋಪಾಲ್ಸ್ ತಂಡದ ಈ ಕಾರ್ಯಾಗಾರದಲ್ಲಿ ಭಾವಹಿಸಬಹುದು. **What'sapp** ಮೂಲಕ ಸಂಪರ್ಕಿಸಿ **9535935622.**



ನನಗೆ ತಿಳಿದಿರುವ ಹಾಗೆ ಯಾವ ರೈತರೂ ಇಂತಹ ಸಂದರ್ಭಗಳಲ್ಲಿ ಹಾಲನ್ನು ಕರೆದು ಚರಂಡಿಗೆ ಎಸೆಯುವುದಿಲ್ಲ, ಬದಲಿಗೆ ಸಮೀಪದ ಡೈರಿಗೆ ಕೊಂಡೊಯ್ದು ಹಾಕುತ್ತಾರೆ. ಇಂತಹ ಹಾಲನ್ನು ನಾವು ಸೇವಿಸಿದಾಗ ಆಗುವ ಅಡ್ಡ ಪರಿಣಾಮಗಳ ಬಗ್ಗೆ ಈ ಹಿಂದಿನ ಲೇಖನಗಳಲ್ಲಿ ಹಲವಾರು ಸಲ ತಿಳಿಸಿರುತ್ತೇನೆ. ವಿಶೇಷವಾಗಿ ಹೆಣ್ಣುಮಕ್ಕಳು ಚಿಕ್ಕ ವಯಸ್ಸಿಗೆ ಋತುಮತಿ ಆಗುತ್ತಿರುವುದು, ಬಂಜೆತನ, ಸಕ್ಕರೆ ಕಾಯಿಲೆ, ಸ್ಕಿಜೋಫ್ರೇನಿಯಾ, ಆಟಿಸಂ ನಂತಹ ಭಯಾನಕ ಕಾಯಿಲೆಗಳು ಹೆಚ್ಚಾಗುತ್ತಿರುವುದು ಇಂತಹ ಹಾಲಿನ ಸೇವನೆಯಿಂದ ಎಂದು ಹಲವಾರು ಸಂಶೋಧನೆಗಳು ತಿಳಿಸುತ್ತಿವೆ.

ಕೇವಲ ಇಷ್ಟೇ ಅಲ್ಲದೆ ರಾಸುಗಳಿಗೆ ರೋಗ ಬಾಧೆ ಉಂಟಾದಾಗ ರೈತರು ಪಶುವೈದ್ಯರನ್ನು ಮನೆ ಹತ್ತಿರ ಕರೆಯಬೇಕು ಅಥವಾ ಅವರಲ್ಲಿಗೆ ಹೋಗಬೇಕು. ಪಶು ಆಸ್ಪತ್ರೆಯಿಂದ ದೂರವಿರುವ ರೈತರಿಗೆ ಇವೆರಡು ಸಹ ಕಷ್ಟವೇ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದೇ ಹಲವಾರು ರಾಸುಗಳು ತೀರಿಕೊಂಡಿರುವುದನ್ನು ನಾನು ನೋಡಿದ್ದೇನೆ. ಕನಿಷ್ಠ ಸಣ್ಣಪುಟ್ಟ ಕಾಯಿಲೆಗಳಿಗಾದರೂ ಪ್ರತಿಯೊಬ್ಬ ಪಶುಪಾಲಕ ಮನೆಮದ್ದು ಮಾಡಲು ಕಲಿಯಬೇಕೆಂಬುದು ಗೋಪಾಲ್ಸ್ ತಂಡದ ಅಭಿಲಾಷೆ. ಇದರಿಂದ ರೈತರ ಸಾವಿರಾರು ಕೋಟಿ ಹಣ ಉಳಿತಾಯವಾಗುತ್ತದೆ. ರಾಸುಗಳಿಗೂ ಮತ್ತು ಮಾನವನಿಗೆ ಯಾವುದೇ ಅಡ್ಡಪರಿಣಾಮಗಳು ಆಗುವುದಿಲ್ಲ, ಪಾರಂಪರಿಕ ವೈದ್ಯ ಪದ್ಧತಿಗಳನ್ನು ಮತ್ತೆ ಪುನಶ್ಚೇತನಗೊಳಿಸಬೇಕು ಎಂದು ಹಲವಾರು ಸಂಘಸಂಸ್ಥೆಗಳು ಈಗಾಗಲೇ ಕಾರ್ಯೋನ್ಮುಖವಾಗಿವೆ.

ಭಾರತದ ಪ್ರಖ್ಯಾತ ಪಾರಂಪರಿಕ ಪಶುವೈದ್ಯರಾದ ಡಾಕ್ಟರ್ ಪುಣ್ಯಮೂರ್ತಿ ಅವರು ಗೋಪಾಲ್ಸ್ ತಂಡದ ಮಹದಾಸೆಯನ್ನು ಪೂರೈಸಲು ತಾವು ಸಹಕಾರ ನೀಡುವುದಾಗಿ ಒಪ್ಪಿಕೊಂಡಿದ್ದಾರೆ. ಶ್ರೀಯುತರು ತಮಿಳುನಾಡಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಪುಣ್ಯ ಮೂರ್ತಿಯವರು ಹಲವಾರು ಸಂಘ ಸಂಸ್ಥೆಗಳ ಜೊತೆಗೂಡಿ ರೈತರಿಗೆ ಪಾರಂಪರಿಕ ಪಶುವೈದ್ಯಕೀಯ ಪದ್ಧತಿಗಳನ್ನು ಪರಿಚಯಿಸುತ್ತಿದ್ದಾರೆ. ಅವರು ಬರೆದ ಜಾನುವಾರುಗಳ ಪ್ರಾಥಮಿಕ ಆರೋಗ್ಯ ಮತ್ತು ಔಷಧೀ ಸಸ್ಯಗಳು (ಪಶು ಆಯುರ್ವೇದ) ಪುಸ್ತಕವು ಬಹಳ ಜನರಿಗೆ ಉಪಯುಕ್ತವಾಗಿದೆ. ಅಡಿಗೆ ಮನೆಯಲ್ಲೇ ಸಿಗುವ ಮೆಣಸು-ಜೀರಿಗೆ, ಈರುಳ್ಳಿ-ಬೆಳ್ಳುಳ್ಳಿಯಂತಹ ಸಾಂಬಾರ ಪದಾರ್ಥಗಳಿಂದ ಹಿಡಿದು ಹಿತ್ತಲಿನಲ್ಲಿ ಸಿಗುವ ಕಳೆಗಿಡಗಳನ್ನು ಸಹ ಬಳಸಿ ಶುಶ್ರೂಷೆ ಮಾಡುವ ವಿಧಾನವನ್ನು ಪುಣ್ಯಮೂರ್ತಿ ಅವರು ಸಾವಿರಾರು ಜನರಿಗೆ ಹೇಳಿಕೊಟ್ಟಿದ್ದಾರೆ.

ಉದಾಹರಣೆಗೆ ಉಣ್ಣೆಗಳು, ಇವು ಬಾಹ್ಯ ಪರಾವಲಂಬಿ ಜೀವಿಗಳು. ಇವು ಹಸುವಿನ ರಕ್ತವನ್ನು ಹೀರಿ ಸಾಕಷ್ಟು ನಷ್ಟವನ್ನುಂಟುಮಾಡುತ್ತವೆ. ಇವುಗಳು ರಕ್ತವನ್ನು ಹೀರುವುದರ ಜೊತೆಗೆ ಸಾಂಕ್ರಾಮಿಕ ರೋಗಗಳನ್ನು ಹರಡಲು ಸಹ ಸಹಾಯ ಮಾಡುತ್ತವೆ. ಉಣ್ಣೆಗಳ ಸಂತಾನೋತ್ಪತ್ತಿಗೆ ರಕ್ತ ಅತಿ ಅವಶ್ಯಕ. ಆಹಾರವಿಲ್ಲದೆ ಇವು ಎರಡು ವರ್ಷಗಳವರೆಗೆ ಸಹ ಬದುಕಬಲ್ಲವು. ಒಂದು ಬಾರಿ ಅವು ಪಶುಗಳಿಗೆ ಅಂಟಿದರೆ ಸಾಕು ಒಂದು ವಾರಕ್ಕಾಗುವಷ್ಟು ರಕ್ತವನ್ನು ಹೀರುತ್ತವೆ. ಇದರಿಂದ ಜಾನುವಾರುಗಳ ಹಾಲಿನ ಉತ್ಪಾದನೆ ಇಳಿಮುಖವಾಗಿ ಅವುಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇದರ ಚಿಕಿತ್ಸೆಗೆ ಪುಣ್ಯಮೂರ್ತಿಯವರು ಸರಳವಾದ ಉಪಾಯವನ್ನು ಸೂಚಿಸಿದ್ದಾರೆ.

**ಬೇಕಾಗುವ ಸಾಮಗ್ರಿಗಳು:** ಬಜೆ 10ಗ್ರಾಂ, ಬೆಳ್ಳುಳ್ಳಿ 10 ಎಸಳುಗಳು, ಒಂದು ಹಿಡಿ ಬೇವಿನ ಎಲೆ, ಅರಿಶಿನ 20 ಗ್ರಾಂ, ಒಂದು ಹಿಡಿ ಬೇಲಿ ಸೊಪ್ಪು (ಲಂಟಾನ), ಒಂದು ಹಿಡಿ ತುಳಸಿ ಎಲೆ.

**ಔಷಧಿಯನ್ನು ತಯಾರಿಸುವ ವಿಧಾನ:** ಮೇಲೆ ತಿಳಿಸಿರುವ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಜಜ್ಜಿ ಅದಕ್ಕೆ ಒಂದು ಲೀಟರ್ ನೀರನ್ನು ಸೇರಿಸಿ ಬಟ್ಟೆಯ ಸಹಾಯದಿಂದ ಶೋಧಿಸಿಕೊಳ್ಳಬೇಕು. ನಂತರ ಈ ನೀರನ್ನು ಹಸುವಿನ ದೇಹಕ್ಕೆ ಚುಮುಕಿಸಬೇಕು ಅಥವಾ ಬಟ್ಟೆಯ ತುಂಡುಗಳನ್ನು ಬಳಸಿ ಉಣ್ಣೆಗಳು ಇರುವ ಜಾಗಕ್ಕೆ ಲೇಪಿಸಬೇಕು. ಇದನ್ನು ಉಣ್ಣೆಗಳು ಸಂಪೂರ್ಣವಾಗಿ ಹತೋಟಿಗೆ ಬರುವವರೆಗೆ ಮುಂದುವರಿಸಬಹುದು.

ಹೀಗೆ ಅವರು ಹೈನೋದ್ಯಮದಲ್ಲಿ ಭಯಾನಕ ರೋಗಗಳಾದ ಕೆಚ್ಚಲುಬಾವು, ಕಾಲು ಬಾಯಿ ರೋಗ, ಹೊಟ್ಟೆ ಉಬ್ಬರ, ಅಜೀರ್ಣ, ಅತಿಸಾರ, ಜಂತುಹುಳು ನಿವಾರಣೆ ಇತ್ಯಾದಿ ರೋಗಗಳಿಗೆ ಪರಿಣಾಮಕಾರಿ ಪರಿಹಾರಗಳನ್ನು ಸೂಚಿಸುತ್ತಾರೆ. ಗೋಪಾಲ್ಸ್ ತಂಡದ ಕರೆಗೆ ಓಗೊಟ್ಟು ಡಾಕ್ಟರ್ ಪುಣ್ಯಮೂರ್ತಿಯವರು ಜನವರಿ 2, 2021 ರಂದು 2.30 –4.00 ವರೆಗೆ **Live** ಬರುವ ಮುಖಾಂತರ ಪಾರಂಪರಿಕ ಪಶು ವೈದ್ಯದ ಕಿರುಪರಿಚಯ ನೀಡಿ ಗೋಪಾಲಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ಇದು ಕೇವಲ ಒಂದು ದಿನದ ಕಾರ್ಯಕ್ರಮವಲ್ಲ, ಡಾಕ್ಟರ್ ಪುಣ್ಯಮೂರ್ತಿ ಅವರಿಂದ ಆಸಕ್ತರಿಗೆ ವಿಶೇಷ ಆನ್ಲೈನ್ ತರಗತಿಗಳನ್ನು ಆಯೋಜಿಸಲಾಗುವುದೆಂದು ಗೋಪಾಲ್ಸ್ ತಂಡ ತಿಳಿಸಿದೆ.